ಮಾಡುತ್ತಾರಲ್ಲ ಜನ ಎಂದೆನಿಸಿತು ನನಗೆ, ವಾರೆಂಟ್ ಸಾಟ್ ಕೇಳಿದ ಪ್ರಶ್ನೆಯೂ ಹಿನ್ನೆಲೆಯಲ್ಲಿ ಕಾಡುತ್ತಿತ್ತು. ನಾನು ಏನೂ ಉತ್ತರಿಸದಿದ್ದುದ ಕಂಡು, ಆತನೇ ಹೇಳಿದ–

'ಸಾರಿ, ತುಂಬಾ ಅಸಡ್ಡಾಳ ಪ್ರಶ್ನೆ ಕೇಳಿದೆ ನಾನು ಎಂಬ ಅರಿವಾಗಿದೆ ನನಗೆ. ಇದು ಬಹಳ ಅಂದರೆ ಬಹಳ ವೈಯಕ್ತಿಕವಾದ, ನನ್ನಂಥ ನನ್ನವರಿಗೆ ಮಾತ್ರ ಅನ್ವಯವಾಗುವ ಪ್ರಶ್ನೆ. ಇದನ್ನ ಜನರಲೈಸ್ ಮಾಡಿದರೆ ತಪ್ಪಾಗುತ್ತದೆ. ಅದೆಷ್ಟೋ ಪ್ರಾಮಾಣಿಕರನ್ನು, ಛಾಯಾಗ್ರಹಣವನ್ನು ಗಂಭೀರವಾಗಿ ತೆಗೆದುಕೊಂಡು ಶ್ರಮಿಸುತ್ತಿರುವವರಿಗೆ ಅವಮಾನ ಮಾಡಿದಂತಾಗುತ್ತದೆ. ಇದು ನನ್ನೊಳಗಿನ ಪ್ರಶ್ನೆಯಷ್ಟೇ. ಅದು ಪ್ರತಿ ಹಂತದಲ್ಲೂ ನನ್ನನ್ನು ಕಾಡುವಂಥದ್ದು. ಕಾಡಲಿ ಬಿಡು. ಐ ಡಿಸರ್ವ್ ಇಟ್. ಒಂದು ವೇಳೆ, 'ವೈರಿ ಪಡೆಗಳ ಆಯಸ್ಥಾನವನ್ನು ಫೋಟೊ ಮುಖೇನ ಶೂಟ್ ಮಾಡುವುದಕ್ಕೂ, ಮಿಸ್ಸೈಲ್ ಹಾರಿಸಿ ಶೂಟ್ ಮಾಡುವುದಕ್ಕೂ ವ್ಯತ್ಯಾಸವೇನು?' ಎಂದು ಯಾರಾದರೂ ಕೇಳಿದರೆ, ಅದು ನನ್ನ ಹಳೆಯ ವೃತ್ತಿಗೆ ಮಾತ್ರ ಸಂಬಂಧಿಸಿದ ಪ್ರಶ್ನೆಯಾಗುತ್ತದೆಯೇ ಹೊರತೂ ಅದು ಸಾರ್ವತ್ರಿಕವಾಗುವುದಿಲ್ಲ. ಹೀಗಾಗಿ ನನ್ನ ಪ್ರಶ್ನೆಯನ್ನು ಹಿಂಪಡೆಯುತ್ತೇನೆ. ಸಾರಿ ಅಗೇನ್.'

ಹಳೆಯದನ್ನೆಲ್ಲ ನೆನಪಿಸಿಕೊಂಡು ಉದ್ವೇಗಕ್ಕೊಳಗಾಗುತ್ತಿದ್ದಾನೆ ಈತ ಎಂಬುದು ಆ ದನಿಯಲ್ಲಿ ಕಾಣುತ್ತಿತ್ತು. ಅದು ಅವನ ಅರಿವಿಗೂ ಬಂದಿರಬೇಕು. ಅಲ್ಲೇ ತುಸು ಸುಧಾರಿಸಿಕೊಂಡು ಮುಂದುವರಿಸಿದ.

'ಇಷ್ಟೆಲ್ಲಾ ಫಿಲಾಸಫಿ ಮಾತಾಡುವವ ಈ ಪಾರ್ಕಿನಲ್ಲೇನು ಮಾಡುತ್ತಿದ್ದಾನೆ ಎನ್ನುವ ಸಂಶಯ ನಿನಗೆ ಬರುತ್ತಿರಬಹುದು. ಇದೇ ಊರಿನವನಾದರೂ ನನ್ನ ಬುಡದಲ್ಲೇ ನಡೆಯುತ್ತಿರುವ ಈ ವಿದ್ಯಮಾನದ ಬಗ್ಗೆ ನನಗೆ ಗೊತ್ತೇ ಇರಲಿಲ್ಲ ನೋಡು. ಕೆಲವು ದಿನಗಳ ಹಿಂದೆ, ಮಲಗಿರುವ ದೈತ್ಯ ಹುಲಿಯೊಂದರ ದಪ್ಪ ವೃಷಣಗಳನ್ನು ಕೈಯಲ್ಲಿ ಹಿಡಿದು ಸೆಲ್ಫಿ ತೆಗೆದು ಇನ್‌ಸ್ಟಾಗ್ರಾಮಿನಲ್ಲಿ ಹಾಕಿದ್ದ ಮಹಿಳೆಯ ಪೋಸ್ಟ್ ಒಂದು ಸಿಕ್ಕಾಪಟ್ಟೆ ವೈರಲ್ ಆಯಿತಲ್ಲ... ಯಸ್, ಗ್ರ್ಯಾಬಿಂಗ್ ದ ಬಾಲ್ಸ್ ಆಫ್ ಅ ಬಿಗ್ ಟೈಗರ್... ಅದಕ್ಕೆ ಪ್ರಾಣಿ ಪ್ರಿಯರ ಸಾಕಷ್ಟು ವಿರೋಧವೂ ಬಂತು ಅನ್ನು. ಅದರ ಜಾಡು ಅರಸಿ ಹೊರಟ ನಾನು ಇಲ್ಲಿಗೆ ಬಂದು ತಲುಪಿದೆ. ಇಲ್ಲಿ ನಡೆಯುತ್ತಿರುವ ಸಂಗತಿಯ ಬಗ್ಗೆ ಒಂದು ವಿಸ್ತೃತ ಡಾಕ್ಯುಮೆಂಟರಿ ಮಾಡಬೇಕು ಅಂದುಕೊಂಡಿರುವೆ. ಇವುಗಳಲ್ಲಿ ಎಷ್ಟು ಲೀಗಲ್ಲು, ಎಷ್ಟು ಇಲ್ಲೀಗಲ್ಲು, ಇದರ ಹಿಂದೆ ಯಾವ್ಯಾವ ಪ್ರಭಾವಿಗಳ ಕೈವಾಡವಿದೆ ಎಂಬುದರೆಲ್ಲದರ ಬೆನ್ನು ಹತ್ತಿ ಹೋಗುತ್ತೇನೆ. ಅದಕ್ಕಾಗಿ ನನ್ನ ಪ್ರತಿಜ್ಞೆ ಮುರಿದು ಮತ್ತೆ ಕ್ಯಾಮರಾ ಕೈಯಲ್ಲಿ ಹಿಡಿಯಬೇಕಾಗಬಹುದು, ತೊಂದರೆಯಿಲ್ಲ...'

'ಕ್ಯಾಮರಾ ಮುಟ್ಟುವುದಿಲ್ಲವೆಂದು ಶಪಥಗೈದಿರುವೆಯೇ? ಯಾಕೆ? ಈ ಎಲ್ಲಾ ಕಾರಣಗಳಿಗಾಗಿ ಮನ ನೊಂದೇ?' ಆಶ್ಚರ್ಯದಿಂದ ಕೇಳಿದೆ ನಾನು.

'ಮನುಷ್ಯನ ಜೀವನದ ಪ್ರಮುಖ ನಿರ್ಧಾರಗಳೆಲ್ಲವುದಕ್ಕೂ ಇಂಥದೇ ನಿಖರ ಕಾರಣ ಇರಬೇಕು ಅಂತೇನಿಲ್ಲ. ಆ ನಿರ್ಧಾರದ ಪ್ರಕಾರವೇ ಬಹು ದೂರ ಸಾಗಿಬಂದಮೇಲೆ, ಮತ್ತೆ ಹಿಂದಿರುಗಿ ನೋಡುತ್ತ ಕಾರಣಗಳನ್ನು ಹುಡುಕುವುದರಲ್ಲಿ, ನಮಗೆ ಯೋಗ್ಯವೆನಿಸಿದ ಕಾರಣವನ್ನು ಆರೋಪಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ' ಎಂದು ಉತ್ತರಿಸಿ, ಕೆಲ ಕ್ಷಣ ಸುಮ್ಮನಿದ್ದು, ನಂತರ–

'ನನ್ನ ಮಗಳು ಡ್ರಗ್ಸ್ ವ್ಯಸನಿಯಾಗಿದ್ದಳು. ಅದು ಅತಿರೇಕಕ್ಕೆ ಹೋಗಿ ಕೊನೆಗೆ ಪ್ರಾಣವನ್ನೇ ಕಳಕೊಂಡಳು. ಶಿ ವಾಸ್ ಫೋರ್ಟೀನ್' ಎಂದು ಚುಟುಕಾಗಿ ಹೇಳಿ ಮತ್ತೆ ಮೌನಕ್ಕೆ ಜಾರಿದ.

* * *

'ನಾನು ಇದುವರೆಗೆ ಸೆರೆಹಿಡಿದಿರುವ ವನ್ಯಜೀವಿಗಳ ಅಷ್ಟೂ ಫೋಟೊಗಳನ್ನು ಎಲ್ಲೂ ಸಿಗದಂತೆ ಡಿಲೀಟ್ ಮಾಡಿದ್ದೇನೆ. ಪತ್ರಿಕೆಗಳಲ್ಲಿ ಪ್ರಕಟವಾದ, ನನ್ನ ಸಂಗ್ರಹದಲ್ಲಿದ್ದ ಅಷ್ಟೂ ಪಟಗಳನ್ನು ಸುಟ್ಟುಹಾಕಿದ್ದೇನೆ. ಆದರೆ ನನ್ನ ಮಗಳ ಫೋಟೊವನ್ನು ನೋಡುವಾಗಲೆಲ್ಲ ಒಂದು ಕಾಲದಲ್ಲಿ ನನ್ನ ಹೆಗ್ಗಳಿಕೆಯ ಕುರುಹಾಗಿದ್ದ ನಾ ತೆಗೆದ ಒಂದೊಂದೇ ಪ್ರಾಣಿಗಳ ಫೋಟೊ ಕಣ್ಮುಂದೆ ಬರುತ್ತದೆ... ಏನು ಮಾಡಲಿ...' ಎನ್ನುತ್ತ ಮುಷ್ಟಿ ಕಟ್ಟಿದ ಕೈಯಿಂದ ಹಣೆ ಕುಟ್ಟಿಕೊಂಡ ವಾರೆಂಟ್ ಸಾಟ್.

ನಾನು ಮಾತು ಮುಂದುವರಿಸಲು ಶಬ್ದಗಳಿಗಾಗಿ ತಡಕಾಡತೊಡಗಿದೆ. ●